


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ದಂಡಯಾತ್ರೆಗಳ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–04–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಕಾಲದ ವಿವಿಧ ಕಾರ್ಯಾಚರಣೆಗಳ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಅವುಗಳಲ್ಲಿ ಫದಕ್‌ನ ಕಡೆಗೆ ಗ್ಹಾಲಿಬ್ ಬಿನ್ ಅಬ್ದುಲ್ಲಾಹ್ ನಡೆಸಿದ ಕಾರ್ಯಾಚರಣೆಯ ಪ್ರಸ್ತಾಪವೂ ಇದೆ. ಹಝ್ರುತ್ ಬಶೀರ್ ಬಿನ್ ಸಅದ್(ರ) ಹಿಜರಿ 7ರ ಶಅಬಾನ್ ತಿಂಗಳಲ್ಲಿ 30 ಜನರೊಂದಿಗೆ ಫದಕ್‌ನ ಬನೂ ಮುರ್ರ ಗೋತ್ರದ ಕಡೆಗೆ ಹೋದರು. ಬಶೀರ್ ಬಿನ್ ಸಅದ್(ರ)ರ ಎಲ್ಲ ಸಹಚರರನ್ನು ಬನೂ ಮುರ್ರ ಗೋತ್ರದವರು ಶಹೀದ್ ಮಾಡಿದರು. ಈ ವಿಷಯವು ಹಝ್ರತ್ ಪೈಗಂಬರ್(ಸ)ರಿಗೆ ತಿಳಿದಾಗ, ಅವರು ಝುಬೈರ್ ಬಿನ್ ಅವ್ವಾಮ್(ರ)ರನ್ನು ಸಿದ್ಧಪಡಿಸಿ ಅವರೊಂದಿಗೆ ಇನ್ನೂರು ಸಹಾಬಿಯರನ್ನು ಕಳುಹಿಸಿದರು. ಈ ಕಾರ್ಯಾಚರಣೆಯಲ್ಲಿ ಮುಸ್ಲಿಮರಿಗೆ ಯಶಸ್ಸು ಲಭಿಸಿತು ಮತ್ತು ಯುದ್ಧ ಸಂಪತ್ತು ಸಹ ಲಭಿಸಿತು.

ಇನ್ನೊಂದು ಶುಜಾಅ್ ಬಿನ್ ವಹಬ್ ನಡೆಸಿದ ಕಾರ್ಯಾಚರಣೆಯಾಗಿದೆ. ಇದು ಹಿಜರಿ 8ರ ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆಯಿತು. ಈ ಕಾರ್ಯಾಚರಣೆಯ ವಿವರಣೆಯನ್ನು ಹೀಗೆ ನೀಡಲಾಗಿದೆ: ಸಿಯ್ಯೀ ಪ್ರದೇಶದಿಂದ ಬನೂ ಹವಾಝಿನ್ ಗೋತ್ರದವರು ಇಸ್ಲಾಂ ವಿರೋಧಿಗಳಿಗೆ ಸಹಾಯ ಮಾಡುತ್ತಿದ್ದಾರೆ ಮತ್ತು ಮುಸ್ಲಿಮರ ಮಿತ್ರ ಪಕ್ಷಗಳ ಜನರನ್ನು ಲೂಟಿ ಮಾಡಿ ಕಾಡುಗಳಲ್ಲಿ ಅಡಗಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ನಿರಂತರವಾಗಿ ಲಭಿಸುತ್ತಿತ್ತು. ಹಿಜರಿ 8ರ ರಬೀಉಲ್ ಅವ್ವಲ್ ತಿಂಗಳಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರುತ್ ಶುಜಾಅ್(ರ)ರನ್ನು 24 ಯೋಧರೊಂದಿಗೆ ಬನೂ ಹವಾಝಿನ್ ಗೋತ್ರದವರನ್ನು ಮಟ್ಟಹಾಕಲು ನೇಮಿಸಿದರು. ಅವರನ್ನು ಬನೂ ಆಮಿರ್ ಎಂದೂ ಕರೆಯಲಾಗುತ್ತಿತ್ತು. ಯೋಧರ ಜೊತೆಗೆ ಹಝ್ರುತ್ ಶುಜಾಅ್ ರಾತ್ರಿ ಸಮಯದಲ್ಲಿ ಪ್ರಯಾಣಿಸುತ್ತಿದ್ದರು ಮತ್ತು ಹಗಲಿನ ಸಮಯದಲ್ಲಿ ಅಡಗಿಕೊಳ್ಳುತ್ತಿದ್ದರು. ಕೊನೆಗೆ ಒಂದು ಬೆಳಿಗ್ಗೆ ಇದ್ದಕ್ಕಿದ್ದಂತೆ ಬನೂ ಆಮಿರ್ ಗೋತ್ರದ ಮೇಲೆ ದಾಳಿ ಮಾಡಿದರು. ಗೋತ್ರದವರನ್ನು ಹಿಂಬಾಲಿಸಬೇಡಿ ಎಂದು ಹಝ್ರುತ್ ಶುಜಾಅ್ ತಮ್ಮ ಯೋಧರಿಗೆ ಆದೇಶ ನೀಡಿದರು. ಅವರಿಗೆ ಅನೇಕ ಒಂಟೆಗಳು ಮತ್ತು ಆಡುಗಳು ಲಭಿಸಿದವು. ಅವುಗಳನ್ನು ಅವರು ಮದೀನಕ್ಕೆ ಓಡಿಸಿಕೊಂಡು ಬಂದರು ಮತ್ತು ಯುದ್ಧ ಸಂಪತ್ತನ್ನು ಹಂಚಿಕೊಂಡರು. ಅವರಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಹದಿನೈದು ಒಂಟೆಗಳು ಲಭಿಸಿದುವು. ಈ ಕಾರ್ಯಾಚರಣೆಗಾಗಿ ಹದಿನೈದು ದಿನಗಳು ಬೇಕಾಗಿ ಬಂತು.

ಇದರ ನಂತರ ಕಅಬ್ ಬಿನ್ ಉಮೈರ್ ಗ್ಹಫ್ಫಾರಿ ನಡೆಸಿದ ಕಾರ್ಯಾಚರಣೆಯ ಉಲ್ಲೇಖವಿದೆ. ಇದು ಹಿಜರಿ 8ರ ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹಝ್ರುತ್ ಕಅಬ್ ಬಿನ್ ಉಮೈರ್ ಗ್ಹಫ್ಫಾರಿ(ರ)ರ ನೇತೃತ್ವದಲ್ಲಿ ಹದಿನೈದು ಸಹಾಬಿಯರನ್ನು ಝಾತುಲ್ ಅತ್‌ಲಾಹ್ ಕಡೆಗೆ ಕಳುಹಿಸಿದರು. ಅದು ವಾದಿಯುಲ್ ಖುರಾದ ಹಿಂಭಾಗದಲ್ಲಿತ್ತು. ಅವರು ಝಾತುಲ್ ಅತ್‌ಲಾಹ್‌ನ ಸಮೀಪಕ್ಕೆ ತಲುಪಿದಾಗ, ಶತ್ರುಗಳ ಒಬ್ಬ ಗೂಢಚಾರ ಅವರನ್ನು ನೋಡಿದನು. ಅವನು ತಕ್ಷಣವೇ ತನ್ನ ಜನರಿಗೆ ಮುಸ್ಲಿಮರ ಮುನ್ನಡೆಯ ಬಗ್ಗೆ ತಿಳಿಸಿದನು. ಅವರು ಸಿದ್ಧತೆ ಮಾಡಿಕೊಂಡರು ಮತ್ತು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿದರು. ಸಹಾಬಿಯರು ಆ ಜನರಿಗೆ ಇಸ್ಲಾಮಿನ ಸಂದೇಶ ನೀಡಿದರು, ಆದರೆ ಅವರು ನಿರಾಕರಿಸಿದರು ಮತ್ತು ಸಹಾಬಿಯರ ಮೇಲೆ ಬಾಣಗಳನ್ನು ಎಸೆಯಲು ಪ್ರಾರಂಭಿಸಿದರು. ಹಝ್ರತ್ ಪೈಗಂಬರ್(ಸ)ರ ಸಹಾಬಿಯರು ಅವರ ಈ ಕೃತ್ಯವನ್ನು ನೋಡಿದಾಗ, ಅವರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದರು. ಕೊನೆಗೆ ಹೋರಾಡುತ್ತಾ ಎಲ್ಲರೂ ಶಹೀದ್ ಆದರು. ಆ ಸಹಾಬಿಯರಲ್ಲಿ ಒಬ್ಬರು ಗಾಯಗೊಂಡ ಸ್ಥಿತಿಯಲ್ಲಿ ಮೃತರ ಗುಂಪಿನಲ್ಲಿದ್ದರು, ಅವರು ಅಲ್ಲಿಂದ ಬಚಾವಾದರು. ಒಂದು ವರದಿಯ ಪ್ರಕಾರ ಅವರು ಹಝ್ರುತ್ ಕಅಬ್ ಬಿನ್ ಉಮೈರ್ ಅವರೇ ಆಗಿದ್ದರು ಎಂದಿದೆ. ಹೇಗಿದ್ದರೂ, ರಾತ್ರಿಯಾದಾಗ ಅವರು ಸವಾರರಾಗಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಈ ಘಟನೆಯ ಬಗ್ಗೆ ತಿಳಿಸಿದರು ಎಂದು ಬರೆಯಲಾಗಿದೆ. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಬಹಳ ದುಃಖವನ್ನುಂಟುಮಾಡಿತು. ತಕ್ಷಣವೇ ಹಝ್ರತ್ ಪೈಗಂಬರ್(ಸ) ಆ ಜನರ ಕಡೆಗೆ ಸೈನ್ಯವನ್ನು ಕಳುಹಿಸಲು ನಿರ್ಧರಿಸಿದರು. ಆದರೆ ಅವರು ಆ ಸ್ಥಳದಿಂದ ಬೇರೆಡೆಗೆ ಹೋಗಿದ್ದಾರೆಂದು ತಿಳಿದಾಗ ಹಝ್ರತ್ ಪೈಗಂಬರ್(ಸ) ಈ ನಿರ್ಧಾರವನ್ನು ಕೈಬಿಟ್ಟರು.

ಮೋತ ಯುದ್ಧ ಹಿಜರಿ 8ರ ಜಮಾದಿಯುಲ್ ಊಲಾ ಅಥವಾ ಕ್ರಿ.ಶ. 629ರ ಸೆಪ್ಟೆಂಬರ್‌ನಲ್ಲಿ ನಡೆಯಿತು. ಮೋತವು ಮದೀನಾದಿಂದ ಸುಮಾರು 600 ಮೈಲುಗಳ ದೂರದಲ್ಲಿ ಸಿರಿಯದಲ್ಲಿದೆ. ಈ ಯುದ್ಧಕ್ಕೆ ಕಾರಣ ಮುಸ್ಲಿಮರ ದೂತ ಹಾರಿಸ್ ಬಿನ್ ಉಮೈರ್(ರ)ರ ವೇದನಾಜನಕ ಶಹಾದತ್ ಆಗಿತ್ತು. ಇದು ಹಝ್ರತ್ ಪೈಗಂಬರ್(ಸ)ರಿಗೆ ಬಹಳ ದುಃಖವನ್ನುಂಟು ಮಾಡಿತ್ತು. ಹಝ್ರುತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ರೋಮನ್ ಸರ್ಕಾರದ ಅಧೀನದಲ್ಲಿ ಬಸ್ರಾದ ಆಡಳಿತಗಾರನಾಗಿದ್ದ ಗ್ಹಸ್ಸಾನ್ ಗೋತ್ರದ ಮುಖ್ಯಸ್ಥನಿಗೆ ಅಥವಾ ರೋಮಿನ ಅರಸನಿಗೆ ಹಝ್ರತ್ ಪೈಗಂಬರ್(ಸ) ಪತ್ರ ಬರೆದರು. ರೋಮನ್ ಗೋತ್ರಗಳು ಮುಸ್ಲಿಮರ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ ಮತ್ತು ಹದಿನೈದು ಮುಸ್ಲಿಮರನ್ನು ನಿರ್ದಯವಾಗಿ ಕೊಂದಿದ್ದಾರೆ ಎಂಬ ದೂರು ಬಹುಶಃ ಆ ಪತ್ರದಲ್ಲಿ

ಇತ್ತು. ಈ ಪತ್ರವನ್ನು ಹಝ್ರತ್ ಹಾರಿಸ್(ರ)ರ ಕೈಯಲ್ಲಿ ಕಳುಹಿಸಲಾಯಿತು. ಅವರು ಮೋತ ಎಂಬ ಸ್ಥಳದಲ್ಲಿ ತಂಗಿದರು. ಅಲ್ಲಿ ಹಝ್ರತ್ ಹಾರಿಸ್(ರ)ರನ್ನು ಗಸ್ಸಾನ್ ಬುಡಕಟ್ಟಿನ ಮುಖ್ಯಸ್ಥ ಶರಹ್‌ಬಿಲ್ ಭೇಟಿಯಾದನು ಮತ್ತು ಅವರನ್ನು ಬಂಧಿಸಿ ಕೊಲ್ಲಿಸಿದನು. ಹಾರಿಸ್(ರ)ರ ಶಹಾದತಿನ ಸುದ್ದಿ ಹಝ್‌ರತ್ ಪೈಗಂಬರ್(ಸ)ರಿಗೆ ತಲುಪಿದಾಗ, ಹಝ್‌ರತ್ ಪೈಗಂಬರ್(ಸ) ಈ ಘಟನೆ ಮತ್ತು ಹಿಂದಿನ ಘಟನೆಗಳಿಗೆ ಶಿಕ್ಷೆಯಾಗಿ ಮೂರು ಸಾವಿರ ಸೈನಿಕರ ತಂಡವನ್ನು ಸಿದ್ಧಪಡಿಸಿ ಝೈದ್ ಬಿನ್ ಹಾರಿಸರನ್ನು ಅದರ ನಾಯಕನನ್ನಾಗಿ ನೇಮಿಸಿದರು. ಝೈದ್ ಹುತಾತ್ಮರಾದರೆ ಹಝ್ರತ್ ಜಾಫರ್ ಬಿನ್ ಅಬೀ ತಾಲಿಬ್ ನಾಯಕರಾಗಲಿ, ಜಾಫರ್ ಬಿನ್ ಅಬೀ ತಾಲಿಬ್ ಹುತಾತ್ಮರಾದರೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹಾ ನಾಯಕರಾಗಲಿ, ಅಬ್ದುಲ್ಲಾ ಬಿನ್ ರವಾಹಾ ಕೂಡ ಶಹೀದ್ ಆಗುವುದಾದರೆ ಮುಸ್ಲಿಮರು ಯಾರನ್ನು ಬೇಕಾದರೂ ತಮ್ಮ ನಾಯಕನನ್ನಾಗಿ ಆರಿಸಿಕೊಳ್ಳಬಹುದು ಎಂದು ಹಝ್‌ರತ್ ಪೈಗಂಬರ್(ಸ) ಹೇಳಿದರು.

ನುಅ್‌ಮಾನ್ ಎಂಬ ಹೆಸರಿನ ಒಬ್ಬ ಯಹೂದಿ ಅಲ್ಲಿ ಇದ್ದನು, ಅವನು ಹೇಳಿದನು: ಹೇ ಅಬುಲ್ ಖಾಸಿಮ್! ನೀವು ಪ್ರವಾದಿಯಾಗಿರುವುದಾದರೆ, ನೀವು ಹೆಸರಿಸಿದವರೆಲ್ಲರೂ ಶಹೀದ್ ಆಗುವರು. ಅನಂತರ ಆತ ಹಝ್ರತ್ ಝೈದ್(ರ)ರೊಡನೆ ಹೇಳಿದನು: ಎಲೈ ಝೈದ್, ವಸಿಯ್ಯತ್ ಮಾಡಿಕೊ. ಮುಹಮ್ಮದ್(ಸ) ಸತ್ಯ ಪ್ರವಾದಿಯಾಗಿದ್ದರೆ, ನೀನು ಹಿಂತಿರುಗಿ ಬರಲು ಸಾಧ್ಯವಿಲ್ಲ. ಹಝ್ರತ್ ಝೈದ್(ರ) ಹೇಳಿದರು: ಮುಹಮ್ಮದ್(ಸ) ಅಲ್ಲಾಹನ ಸತ್ಯ ಪ್ರವಾದಿ ಎಂದು ನಾನು ಸಾಕ್ಷಿ ಹೇಳುತ್ತೇನೆ. ಹಝ್‌ರತ್ ಪೈಗಂಬರ್(ಸ) ನಾಯಕರನ್ನು ನೇಮಿಸುತ್ತಿದ್ದಾಗ, ಹಝ್ರತ್ ಜಾಫರ್(ರ) ಹೀಗೆ ಹೇಳಿದರು: ಹೇ ಅಲ್ಲಾಹನ ರಸೂಲರೇ! ನೀವು ನನ್ನ ಮೇಲೆ ಝೈದ್‌ರನ್ನು ನಾಯಕರನ್ನಾಗಿ ನೇಮಿಸುತ್ತೀರಿ ಎಂದು ನಾನು ಭಾವಿಸಿರಲಿಲ್ಲ. ಹಝ್‌ರತ್ ಪೈಗಂಬರ್(ಸ) ಹೇಳಿದರು, ಹೋಗು! ಯಾವುದು ಉತ್ತಮ ಎಂದು ನಿನಗೆ ಗೊತ್ತಿಲ್ಲ.

ಹಝ್‌ರತ್ ಪೈಗಂಬರ್(ಸ) ಹಝ್ರತ್ ಝೈದ್(ರ)ರಿಗೆ ಒಂದು ಶ್ವೇತ ವರ್ಣದ ಧ್ವಜವನ್ನು ನೀಡಿದರು ಮತ್ತು ಹಝ್ರತ್ ಹಾರಿಸ್(ರ) ಹುತಾತ್ಮರಾದ ಸ್ಥಳಕ್ಕೆ ತಲುಪಿ ಜನರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸಲು ನಿರ್ದೇಶಿಸಿದರು. ಅವರು ಸ್ವೀಕರಿಸಿದರೆ ಸರಿ, ಇಲ್ಲದಿದ್ದರೆ ಅಲ್ಲಾಹನಲ್ಲಿ ಸಹಾಯ ಯಾಚಿಸಿ ಅವರ ವಿರುದ್ಧ ಯುದ್ಧ ಮಾಡಿರಿ ಎಂದು ಹೇಳಿದರು. ಹಝ್‌ರತ್ ಪೈಗಂಬರ್(ಸ) ಆ ಜನರನ್ನು ಬೀಳ್ಕೊಡುವಾಗ ಹೀಗೆ ಉಪದೇಶ ನೀಡಿದರು: ನೀವು ಅಲ್ಲಾಹನ ಭಯಭಕ್ತಿಯನ್ನು ಕೈಗೊಳ್ಳಿರಿ ಮತ್ತು ನಿಮ್ಮೊಂದಿಗಿರುವ ಮುಸ್ಲಿಮರೊಂದಿಗೆ ಉತ್ತಮವಾಗಿ ವರ್ತಿಸಿರಿ. ಅಲ್ಲಾಹನ ನಾಮದಲ್ಲಿ ಅಲ್ಲಾಹನ ಶತ್ರುಗಳೊಂದಿಗೆ ಹೋರಾಡಿರಿ. ಯಾರಿಗೂ ಮೋಸ ಮಾಡಬೇಡಿ, ವಿಶ್ವಾಸಘಾತ ಮಾಡಬೇಡಿ, ಯಾವುದೇ ಶಿಶುವನ್ನು ಕೊಲ್ಲಬೇಡಿ, ಸ್ತ್ರೀಯರನ್ನು ಹಾಗೂ ವೃದ್ಧರನ್ನು ಕೊಲ್ಲಬೇಡಿ, ಖರ್ಜೂರದ ಮರವನ್ನಾಗಲೀ ಇತರ ಮರವನ್ನಾಗಲೀ ಕಡಿಯಬೇಡಿರಿ. ಯಾವುದೇ ಕಟ್ಟಡವನ್ನು ಕೆಡವಬೇಡಿ. ಅನಂತರ ಸೇನಾಧಿಪತಿಯೊಡನೆ ಹೀಗೆ ಹೇಳಿದರು: ನೀವು ಯಾವುದೇ ಮುಶ್ರಿಕರನ್ನು ಭೇಟಿಯಾದರೆ ಅವರಿಗೆ ಮೂರು ವಿಷಯಗಳ ಆಹ್ವಾನ ನೀಡಿರಿ. ಅವುಗಳಲ್ಲಿ ಯಾವುದನ್ನಾದರೂ ಅವರು ಒಪ್ಪಿಕೊಂಡರೆ, ಅದನ್ನು ಸ್ವೀಕರಿಸಿರಿ ಮತ್ತು ಅವರಿಗೆ ತೊಂದರೆ ನೀಡಬೇಡಿ. ಅವರೊಡನೆ ತಮ್ಮ ಊರಿನಿಂದ ಮುಹಾಜಿರರ ಊರಿಗೆ ಹೋಗಲು ಹೇಳಿರಿ. ಅವರು ಹಾಗೆ ಮಾಡಿದರೆ, ಮುಹಾಜಿರರಿಗೆ ಯಾವುದು ಇದೆಯೋ ಅದು ಅವರಿಗೂ ಇದೆ ಮತ್ತು ಮುಹಾಜಿರರ ಮೇಲೆ ಯಾವುದು ಇದೆಯೋ ಅದು ಅವರ ಮೇಲೂ ಇದೆ ಎಂದು ಅವರಿಗೆ ತಿಳಿಸಿರಿ. ಅವರು ನಿರಾಕರಿಸಿದರೆ, ಮುಸ್ಲಿಮರಲ್ಲಿ ಗ್ರಾಮೀಣ ವಾಸಿಯರ ಕಡೆಗೆ ಹೋಗಿರಿ ಎಂದು ಅವರೊಡನೆ ಹೇಳಿರಿ. ಹಾಗಾದರೆ ಉಳಿದ ಮುಸ್ಲಿಮರ ಮೇಲೆ ಇರುವ ಅಲ್ಲಾಹನ ಅದೇ ಆಜ್ಞೆ ಅವರ ಮೇಲೂ ಇರುವುದು. ಆದರೆ ಅವರು ಮುಸ್ಲಿಮರೊಂದಿಗೆ ಸೇರಿ ಜಿಹಾದ್ ಮಾಡುವ ವರೆಗೂ ಅವರಿಗೆ ಯುದ್ಧ ಸಂಪತ್ತಿನಿಂದ ಮತ್ತು ಯುದ್ಧ ಮಾಡದೇ ಲಭಿಸುವ ಸಂಪತ್ತಿನಿಂದ ಪಾಲು ದೊರೆಯದು. ಅವರು ಅದನ್ನೂ ನಿರಾಕರಿಸಿದರೆ, ಅವರಿಂದ ಜಿಝ್ಯಿಯ ಪಡೆಯಿರಿ. ಅವರು ಜಿಝ್ಯಿಯ ನೀಡಲು ಒಪ್ಪಿಕೊಂಡರೆ ಸ್ವೀಕರಿಸಿರಿ ಮತ್ತು ಅವರನ್ನು ತೊಂದರೆಗೆ ಗುರಿಪಡಿಸಬೇಡಿರಿ. ಅವರು ಅದನ್ನೂ ನಿರಾಕರಿಸಿದರೆ, ಅವರ ವಿರುದ್ಧ ಅಲ್ಲಾಹನೊಡನೆ ಸಹಾಯ ಯಾಚಿಸಿಕೊಂಡು ಯುದ್ಧ ಮಾಡಿರಿ. ನೀವು ಯಾವುದೇ ಕೋಟೆ ಅಥವಾ ನಗರವನ್ನು ಮುತ್ತಿಗೆ ಹಾಕಿದರೆ ಹಾಗೂ ಅವರು ಅಲ್ಲಾಹನ ಮತ್ತು ಅವನ ರಸೂಲರ ಜವಾಬ್ದಾರಿಯನ್ನು ನಿಗದಿಪಡಿಸಲು ಬಯಸಿದರೆ, ಅವರಿಗೆ ಅಲ್ಲಾಹನ ಮತ್ತು ಅವನ ರಸೂಲರ ಜವಾಬ್ದಾರಿಯನ್ನು ನಿಗದಿಪಡಿಸಬೇಡಿರಿ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಅಲ್ಲಾಹನ ವಿಧಿಯ ಪ್ರಕಾರ ಈ ಘಟನೆ ನಿಖರವಾಗಿ ಅದೇ ರೀತಿ ನೆರವೇರಿತು. ಮೊದಲು ಹಝ್ರತ್ ಝೈದ್(ರ) ಶಹೀದ್ ಆದರು. ಅನಂತರ ಹಝ್ರತ್ ಜಾಫರ್(ರ) ಸೈನ್ಯದ ನೇತೃತ್ವ ವಹಿಸಿದರು ಮತ್ತು ಅವರೂ ಶಹೀದ್ ಆದರು, ಅದರ ನಂತರ ಅಬ್ದುಲ್ಲಾ ಬಿನ್ ರವಾಹಾ(ರ) ಸೈನ್ಯದ ನೇತೃತ್ವ ವಹಿಸಿದರು. ಅವರೂ ಶಹೀದ್ ಆದರು. ಸೈನ್ಯದಲ್ಲಿ ಗೊಂದಲ ಉಂಟಾಗುವ ಸ್ಥಿತಿಯುಂಟಾಯಿತು. ಆಗ ಕೆಲವು ಮುಸ್ಲಿಮರ ಮಾತಿಗೆ ಬೆಲೆಕೊಟ್ಟು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಇಸ್ಲಾಮೀ ಧ್ವಜವನ್ನು ಹಿಡಿದುಕೊಂಡರು ಮತ್ತು ಅಲ್ಲಾಹನು ಅವರ ಮೂಲಕ ಮುಸ್ಲಿಮರಿಗೆ ವಿಜಯವನ್ನು ನೀಡಿದನು. ಅವರು ಇಸ್ಲಾಮೀ ಸೈನ್ಯವನ್ನು ಸುರಕ್ಷಿತವಾಗಿ ಮರಳಿ ತಂದರು.

(ಹುಝೂರ್ ಹೇಳಿದರು:) ಈ ಪ್ರಸ್ತಾಪ ಮುಂದುವರಿಯುವುದು ಇನ್‌ಶಾ ಅಲ್ಲಾಹ್. ಈಗ ನಾನು ಶಹೀದ್‌ರೊಬ್ಬರ ಮತ್ತು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತೇನೆ ಹಾಗೂ ಜುಮಾ ನಮಾಝಿನ ನಂತರ ಅವರ ಜನಾಝಃ ಗ್ವಾಇಬ್ ನಮಾಝನ್ನು ನಿರ್ವಹಿಸುತ್ತೇನೆ.

1. ಸನ್ಮಾನ್ಯ ಚೌಧರಿ ನಝೀರ್ ಅಹ್ಮದ್ ಚೀಮಾ ಸಾಹಿಬ್‌ರ ಪುತ್ರನಾದ ಸನ್ಮಾನ್ಯ ಲಯೀಕ್ ಅಹ್ಮದ್ ಚೀಮ ಸಾಹಿಬ್‌ರನ್ನು ಏಪ್ರಿಲ್ 18ರಂದು ಕರಾಚಿಯಲ್ಲಿ ಗುಂಪೊಂದು ದಾಳಿ ಮಾಡಿ ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆದು ಬಹಳ ಕ್ರೂರವಾಗಿ ಶಹೀದ್ ಮಾಡಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಶಹೀದ್‌ರ ಪ್ರಾಯ 47 ಆಗಿತ್ತು. ದಿವಂಗತರು ಒಂದು ವರ್ಕ್‌ಶಾಪ್ ನಡೆಸುತ್ತಿದ್ದರು. ಅವರ ಪ್ರಾಮಾಣಿಕತೆಯ ಕಾರಣದಿಂದ ಅವರ ವ್ಯವಹಾರವು ಸಾಕಷ್ಟು ವಿಸ್ತಾರಗೊಂಡಿತ್ತು. ದಿವಂಗತರು ವಸಿಯ್ಯತ್ ಮಾಡಿದ್ದರು ಮತ್ತು ಜಮಾಅತಿನ ಬಹಳ ಸಕ್ರಿಯ ಸೇವಕರಾಗಿದ್ದರು. ನಮಾಝ್ ಮತ್ತು ಉಪವಾಸ ಅನುಷ್ಠಿಸುವವರು, ತಹಜ್ಜುದ್ ನಿರ್ವಹಿಸುವವರು, ಸ್ನೇಹಮಯಿ, ಬಹಳ ಧೈರ್ಯಶಾಲಿ ಮತ್ತು ಇತರರಿಗೆ ಧೈರ್ಯ ತುಂಬುವವರು, ಖಿಲಾಫತಿನೊಂದಿಗೆ ವಿಶೇಷ ಸಂಬಂಧ

ಹೊಂದಿದವರು, ಖುತ್ಬಗಳನ್ನು ಗಮನವಿಟ್ಟು ಆಲಿಸುವವರು ಆಗಿದ್ದರು. ಜಮಾಅತಿನ ಕರ್ತವ್ಯಗಳು ಮತ್ತು ಮೊಕದ್ದಮೆಗಳ ವಿಚಾರಣೆಗೆ ಹಾಜರಾಗಲು ಸದಾ ಸಿದ್ಧರಿರುತ್ತಿದ್ದರು. ಹುತಾತ್ಮರಾಗುವುದಕ್ಕೆ ಎರಡು ದಿನಗಳ ಮೊದಲು ವಿರೋಧಿಗಳಿಂದ ನ್ಯಾಯಾಲಯದಲ್ಲಿ ಅವರಿಗೆ ಬೆದರಿಕೆಗಳನ್ನು ಕೂಡ ನೀಡಲಾಗಿತ್ತು. ಅವರಿಗೆ ಪವಿತ್ರ ಖುರ್‌ಆನಿನೊಂದಿಗೆ ಅಪಾರವಾದ ಪ್ರೀತಿ ಇತ್ತು. ಅವರು ಇಬ್ಬರು ಪತ್ನಿಯರು ಮತ್ತು ಏಳು ಮಕ್ಕಳನ್ನು ಅಗಲಿದ್ದಾರೆ. ಇದರ ಹೊರತಾಗಿ ಸಹೋದರಿ ಮತ್ತು ಸಹೋದರರೂ ಇದ್ದಾರೆ.

(ಶಹೀದ್‌ರ ಕುರಿತಿನ ಪ್ರಸ್ತಾಪದ ನಂತರ ಹುಝೂರ್ ಹೇಳಿದರು:) ಇಂದು ಕೂಡ ಕಸೂರಿನ ಒಂದು ಹಳ್ಳಿಯಲ್ಲಿ ಒಬ್ಬ ಅಹ್ಮದಿ ಯುವಕನ ಶಹಾದತಿನ ಮಾಹಿತಿ ಲಭಿಸಿದೆ. ಹೆಚ್ಚಿನ ವಿವರಗಳು ಇನ್ನೂ ಬಂದಿಲ್ಲ.

(ಅನಂತರ ವಿರೋಧಿಗಳಿಗೆ ಸಂಬಂಧಪಟ್ಟು ಹುಝೂರ್ ಹೀಗೆ ದುಆ ಮಾಡಿದರು:) ಈ ದುಷ್ಟರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ. ಅವರಿಗಾಗಿ ಈಗ ಮಾಡಬೇಕಾದ ದುಆ ಇದೇ ಆಗಿದೆ:

اَللّٰهُمَّ مَزِّقْهُمْ كُلَّ مُمَزَّقٍ وَسَحِّقْهُمْ تَسْحِيْقًا

2. ಡಾಕ್ಟರ್ ಮಸೂದುಲ್ ಹಸನ್ ನೂರಿ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಅಮತುಲ್ ಮುಸವ್ವಿರ್ ನೂರಿ ಸಾಹಿಬ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ)ರ ಮತ್ತು ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಮ್ ಸಾಹಿಬ(ರ)ರ ಮೊಮ್ಮಗಳು ಮತ್ತು ಮಿರ್ಝಾ ದಾವೂದ್ ಅಹ್ಮದ್ ಸಾಹಿಬ್‌ರ ಪುತ್ರಿಯಾಗಿದ್ದರು. (ಹುಝೂರ್ ಹೇಳಿದರು:) ಅವರು ನನ್ನ ಚಿಕ್ಕಪ್ಪನ ಮಗಳು ಆಗಿದ್ದರು. ಅಲ್ಲಾಹನ ಕೃಪೆಯಿಂದ ಅವರು ವಸಿಯ್ಯತ್ ಮಾಡಿದ್ದರು. ಅವರು ನಮಾಝ್ ಮತ್ತು ಉಪವಾಸವನ್ನು ಅನುಷ್ಠಿಸುವವರು, ಅಲ್ಲಾಹನಲ್ಲಿ ಭರವಸೆ ಇಡುವವರು, ಉತ್ತಮ ಸ್ವಭಾವದವರು, ವಿವಿಧ ಧರ್ಮಗಳ ಅಧ್ಯಯನ ಮಾಡುವವರು, ಪತಿಯೊಂದಿಗೆ ಸಹಕರಿಸುವವರು, ಸಹನೆ ಉಳ್ಳವರು, ದೀನಿನ ನಿಷ್ಠಾವಂತ ಸೇವಕಿ, ಪವಿತ್ರ ಖುರ್‌ಆನಿನೊಂದಿಗೆ ಪ್ರೀತಿ ಹೊಂದಿದವರು, ಬಡವರ ಬಗ್ಗೆ ಸಹಾನುಭೂತಿ ಉಳ್ಳವರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಗ್ರಂಥಗಳನ್ನು ಓದುವವರು, ವಖ್ಫೇ ಝಿಂದಗಿಯರನ್ನು ಗೌರವಿಸುವ ಮಹಿಳೆ ಆಗಿದ್ದರು.

3. ಬುರ್ಕಿನಾ ಫಾಸೊದ ಲೋಕಲ್ ಮುಬಲ್ಲಿಗ್‌ರಾದ ಸನ್ಮಾನ್ಯ ಹಸನ್ ಸಾನುಘು ಅಬೂಬಕರ್ ಸಾಹಿಬ್. ಇತ್ತೀಚೆಗೆ ಅವರು ತನ್ನ 63ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಸ್ಥಳೀಯ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ದರ್ಸ್ ನೀಡುತ್ತಿದ್ದರು, ಅದು ರೇಡಿಯೊದಲ್ಲಿ ಪ್ರಸಾರವಾಗುತ್ತಿತ್ತು. ದಿವಂಗತರು ಅಲ್–ಅಝ್‌ಹರ್ ವಿಶ್ವವಿದ್ಯಾಲಯದಿಂದ ಶಿಕ್ಷಣ ಪಡೆದಿದ್ದರು. ದಿವಂಗತರು ಸಾತ್ವಿಕರು, ತಬ್ಲೀಗಿನ ಬಗ್ಗೆ ಆಸಕ್ತಿ ಹೊಂದಿದವರು, ಧೈರ್ಯಶಾಲಿ, ಅತ್ಯುತ್ತಮ ವಾಗ್ಮಿ, ಖ಼ತೀಬ್, ಪವಿತ್ರ ಖುರ್‌ಆನಿನೊಂದಿಗೆ ಪ್ರೀತಿ ಹೊಂದಿದವರು, ನಗುಮುಖದ ವ್ಯಕ್ತಿ ಆಗಿದ್ದರು. (ಅಲ್ಲಾಹನು ಯಾವಾಗಲೂ ಇಂತಹ ಸೇವೆ ಮಾಡುವವರನ್ನು ಜಮಾಅತಿಗೆ ನೀಡುತ್ತಿರಲಿ ಎಂದು ಹುಝೂರ್ ದುಆ ಮಾಡಿದರು.)

(ಖುತ್ಬದ ಕೊನೆಯಲ್ಲಿ ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak'**, Islamabad, Tilford,* U.K. On 25-04-2025

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon